ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1**

ಸಂಖ್ಯೆ : ಎಡಿಎಂ2(2)ಸ.ಶಾ.ವಿಲೀನ:1:2011–12 ದಿನಾಂಕ: 24.9.2011

## ಅಧಿಕೃತ ಜ್ಞಾಪನ

**ವಿಷಯ : 5 ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಸರ್ಕಾರಿ ಕಿರಿಯ / ಹಿರಿಯ ಪ್ರಾಥಮಿಕ ಶಾಲೆಗಳನ್ನು ನೆರೆಹೊರೆ ಶಾಲೆಗಳೊಂದಿಗೆ ವಿಲೀನಗೊಳಿಸುವ ಹಾಗೂ ಆ ಶಾಲೆಗಳನ್ನು ಸಬಲೀಕರಣ ಮಾಡುವ ಬಗ್ಗೆ.**

ಉಲ್ಲೇಖ : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಿಚವರ ಅಧ್ಯಕ್ಷತೆಯಲ್ಲಿ ದಿನಾಂಕ : 22.09.2011 ರಂದು ಸರ್ವ ಶಿಕ್ಷಣ ಅಭಿಯಾನ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು.

– – –

**ಪ್ರಸ್ತಾವನೆ :**

2010–11 ರ DISE ಮಾಹಿತಿ ರೀತ್ಯ, ರಾಜ್ಯದಲ್ಲಿ ಸುಮಾರು 590 ಸರ್ಕಾರಿ ಕಿರಿಯ ಪ್ರಾಥಮಿಕ ಹಾಗೂ 27 ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 5ಕ್ಕಿಂತ ಕಡಿಮೆ ಇರುವುದನ್ನು ಗಮನಿಸಲಾಗಿದೆ. ಮಕ್ಕಳ ಕಲಿಕೆಯ ಹಿತದೃಷ್ಟಿಯಿಂದ, ಈ ಶಾಲೆಗಳಲ್ಲಿರುವ ಮಕ್ಕಳನ್ನು ನೆರೆಹೊರೆಯಲ್ಲಿರುವ, ಸಂಪನ್ಮೂಲ ಹೊಂದಿರುವ ಶಾಲೆಗಳಿಗೆ ವಿಲೀನಗೊಳಸಿದಲ್ಲಿ, ಇಂತಹ ಶಾಲೆಗಳನ್ನು ಸಬಲೀಕರಣ ಮಾಡಿದಂತಾಗುತ್ತದೆ ಹಾಗೂ ವಿದ್ಯಾರ್ಥಿಗಳಿಗೆ ಸರಿಯಾದ ಕಲಿಕಾ ವಾತಾವರಣವನ್ನು ಒದಗಿಸಿದಂತಾಗುತ್ತದೆ ಎಂದು ಸರ್ಕಾರದ ಮಟ್ಟದಲ್ಲಿ ನಿರ್ಧರಿಸಲಾಗಿದೆ. ಆದ್ದರಿಂದ, ಈ ಕೆಳಗಿನಂತೆ ಆದೇಶ ನೀಡಲಾಗಿದೆ :

**ಆದೇಶ :**

1. 5ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಸರ್ಕಾರಿ ಕಿರಿಯ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳನ್ನು ಆ ಪ್ರದೇಶದ ಸುತ್ತಮುತ್ತ 3 ಕಿ.ಮೀ. ವ್ಯಾಪ್ತಿಯಲ್ಲಿ ಉತ್ತಮ ಸಾರಿಗೆ, ಸಂಪರ್ಕವಿರುವ ಜನ ವಸತಿಯ, ಸಂಪನ್ಮೂಲ ಹೊಂದಿರುವ ಸರ್ಕಾರಿ ಕಿರಿಯ ಅಥವಾ ಹಿರಿಯ ಪ್ರಾಥಮಿಕ ಶಾಲೆಗಳಿಗೆ ವಿಲೀನಗೊಳಿಸಲು ಕ್ರಮ ಕೈಗೊಳ್ಳಬೇಕು.
2. ಈ ವ್ಯವಸ್ಥೆಯನ್ನು 28ನೇ ಅಕ್ಟೋಬರ್ 2011 ರಿಂದ ಜಾರಿಯಾಗಲಿರುವ ಸೆಮಿಸ್ಟರ್‌ನಿಂದಲೇ ಪ್ರಾರಂಭಿಸಬೇಕು.
3. ಒಂದು ವೇಳೆ, ಆ ಪ್ರದೇಶದ ಸುತ್ತಮುತ್ತ 3 ಕಿ.ಮೀ. ವ್ಯಾಪ್ತಿಯೊಳಗೆ ಬೇರೆ ಶಾಲೆಗಳು ಲಭ್ಯವಿಲ್ಲದಿದ್ದಲ್ಲಿ, 5ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳನ್ನು ಹಾಗೆಯೇ ಮುಂದುವರಿಸತಕ್ಕದ್ದು.
4. ವಿಲೀನಗೊಳ್ಳಲಿರುವ ಶಾಲೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ವಿಲೀನಗೊಳಿಸಲಾಗುವ ಶಾಲೆಗಳಲ್ಲಿ ಮುಂದಿನ ಶೈಕ್ಷಣಿಕ ವರ್ಷದವರೆಗೆ ತಾತ್ಕಾಲಿಕವಾಗಿ ಕರ್ತವ್ಯವನ್ನು ನಿರ್ವಹಿಸತಕ್ಕದ್ದು.

5. ವಿಲೀನಗೊಳ್ಳುತ್ತಿರುವ ಶಾಲೆಗಳಲ್ಲಿರುವ ಅಡುಗೆ ಸಹಾಯಕರನ್ನು ಕರ್ತವ್ಯದಿಂದ ಬಿಡುಗಡೆ ಮಾಡತಕ್ಕದ್ದು ಮತ್ತು ವಿಲೀನಪಡೆಯುತ್ತಿರುವ ಶಾಲೆಗಳಲ್ಲಿ ಸರ್ಕಾರಿ ನಿಯಮದಂತೆ ಹೆಚ್ಚುವರಿ ಅಡುಗೆ ಸಹಾಯಕರ ಅವಶ್ಯಕತೆ ಉಂಟಾದಲ್ಲಿ ವಿಲೀನಗೊಳ್ಳುತ್ತಿರುವ ಶಾಲೆಗಳಲ್ಲಿರುವ ಅಡುಗೆ ಸಹಾಯಕರನ್ನೇ ಆದ್ಯತೆ ಮೇರೆಗೆ ನೇಮಕ ಮಾಡಿಕೊಳ್ಳತಕ್ಕದ್ದು.
6. ಅಡುಗೆ ಕೋಣೆಯಲ್ಲಿರುವ ಎಲ್ಲಾ ಸಾಮಗ್ರಿಗಳನ್ನು ವಿಲೀಗೊಳ್ಳುತ್ತಿರುವ ಶಾಲೆಗಳಿಗೆ ವರ್ಗಾಯಿಸತಕ್ಕದ್ದು ಹಾಗೂ ಎಲ್ಲಾ ದಾಖಲೆಗಳು, ಲೆಕ್ಕಪತ್ರಗಳನ್ನು, ಪಾಠ ಹಾಗೂ ಪೀಠೋಪಕರಣಗಳು ಮತ್ತು ಇತರ ಎಲ್ಲಾ ಜರಾಸ್ತಿಗಳನ್ನು ಕೂಡ ವಿಲೀನಪಡೆಯುತ್ತಿರುವ ಶಾಲೆಗಳಿಗೆ ಕಳುಹಿಸತಕ್ಕದ್ದು. ವಿಲೀನ ಪಡೆಯುತ್ತಿರುವ ಶಾಲೆಗಳ ಮುಖ್ಯೋಪಾಧ್ಯಾಯರು ಅವುಗಳನ್ನು ಸಂರಕ್ಷಿಸಿ, ದಾಖಲೆಗಳನ್ನು ನಿರ್ವಹಿಸತಕ್ಕದ್ದು.

ಈ ಪ್ರಕ್ರಿಯೆಯು ನಿತರಂತರವಾಗಿ ನಡೆಯಬೇಕಾಗಿದ್ದು, ಪ್ರತಿ ಶೈಕ್ಷಣಿಕ ವರ್ಷದ ಜೂನ್ ತಿಂಗಳಲ್ಲಿ 5 ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಎಲ್ಲಾ ಶಾಲೆಗಳನ್ನು ಸುತ್ತಮುತ್ತಲಿನ 3 ಕಿ.ಮೀ. ವ್ಯಾಪ್ತಿಯಲ್ಲಿರುವ ಸಂಪದ್ಭರಿತ ಶಾಲೆಗಳಿಗೆ ವಿಲೀನಗೊಳಿಸಲು ಈ ಮೇಲಿನಂತೆಯೇ ಕ್ರಮ ಕೈಗೊಳ್ಳತಕ್ಕದ್ದು.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು.

ಗೆ :

1) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ).
2) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಜಿಲ್ಲಾ ಉಪನಿರ್ದೇಶಕರುಗಳ ಮುಖಾಂತರ.

ಪ್ರತಿಯನ್ನು ಮುಂದಿನ ಕ್ರಮಕ್ಕಾಗಿ :

1) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಗುಲ್ಬರ್ಗಾ.
2) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.
3) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹ ನಿರ್ದೇಶಕರುಗಳಿಗೆ.

ಪ್ರತಿಯನ್ನು ಮಾಹಿತಿಗಾಗಿ ಹಾಗೂ ಗೌರವಪೂರ್ವಕವಾಗಿ :

1) ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇವರಿಗೆ ಸಲ್ಲಿಸಿದೆ.

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

**ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1**

ಸಂಖ್ಯೆ : ಎಡಿಎಂ2(2)ಸ.ಶಾ.ವಿಲೀನ:1:2011–12 ದಿನಾಂಕ: 24.9.2011

**ಸು ತ್ತೋ ಲೆ**

**ವಿಷಯ : 10 ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಸರ್ಕಾರಿ ಕಿರಿಯ / ಹಿರಿಯ ಪ್ರಾಥಮಿಕ ಶಾಲೆಗಳನ್ನು ನೆರೆಹೊರೆ ಶಾಲೆಗಳಿಗೆ ವಿಲೀನಗೊಳಿಸುವ ಹಾಗೂ ಶಾಲೆಗಳ ಸಬಲೀಕರಣದ ಬಗ್ಗೆ.**

**ಉಲ್ಲೇಖ : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಿಚವರ ಅಧ್ಯಕ್ಷತೆಯಲ್ಲಿ ದಿನಾಂಕ : 22.09.2011 ರಂದು ಸರ್ವ ಶಿಕ್ಷಣ ಅಭಿಯಾನ ಕಛೇರಿಯಲ್ಲಿ ನಡೆದ ಸಭೆಯ ನಡಾವಳಿಗಳು.**

– – –

ರಾಜ್ಯದಲ್ಲಿ ಸುಮಾರು 2483 ಕಿರಿಯ ಪ್ರಾಥಮಿಕ ಹಾಗೂ 74 ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ 10ಕ್ಕಿಂತ ಕಡಿಮೆ ಇರುವುದನ್ನು ಪರಿಶೀಲಿಸಲಾಗಿದೆ. ಮಕ್ಕಳ ಗುಣಾತ್ಮಕ ಶಿಕ್ಷಣ ಮತ್ತು ಕಲಿಕೆಯ ಹಿತದೃಷ್ಟಿಯಿಂದ, ಈ ಶಾಲೆಗಳಲ್ಲಿರುವ ಮಕ್ಕಳನ್ನು ನೆರೆಹೊರೆಯಲ್ಲಿರುವ ಹೆಚ್ಚು ಸಂಪನ್ಮೂಲ ಹೊಂದಿರುವ ಶಾಲೆಗಳಿಗೆ ವಿಲೀನಗೊಳಿಸಿದಲ್ಲಿ, ಇಂತಹ ಶಾಲೆಗಳನ್ನು ಸಬಲೀಕರಣ ಮಾಡಿದಂತಾಗುತ್ತದೆ ಹಾಗೂ ವಿದ್ಯಾರ್ಥಿಗಳಿಗೆ ಸರಿಯಾದ ಕಲಿಕಾ ವಾತಾವರಣವನ್ನು ಹಾಗೂ ಅರ್ಥಪೂರ್ಣ ಸಹಪಠ್ಯ ಅನುಭವಗಳನ್ನು ಒದಗಿಸಿದಂತಾಗುತ್ತದೆ ಎಂದು ಸರ್ಕಾರದ ಮಟ್ಟದಲ್ಲಿ ನಿರ್ಧರಿಸಲಾಗಿದೆ.

ಮೇಲಿನ ಕಾರಣಗಳಿಂದ ವಿದ್ಯಾರ್ಥಿಗಳಿಗೆ ಮುಕ್ತ ಕಲಿಕೆಯ ವಾತಾವರಣ ಹಾಗೂ ಶಿಕ್ಷಕರ ಸಬಲೀಕರಣಕ್ಕಾಗಿ ಈ ಕೆಳಗಿನಂತೆ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ :

1) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳು, ತಮ್ಮ ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನಿರ್ದೇಶನ ನೀಡಿ, 10ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳನ್ನು ಹತ್ತಿರದ ಯಾವ ಸರ್ಕಾರಿ ಶಾಲೆಗಳಿಗೆ ವಿಲೀನಗೊಳಿಸಬೇಕೆಂಬ ಬಗ್ಗೆ ಯೋಜನೆ ತಯಾರು ಮಾಡಿಸಲು ಕ್ರಮ ಕೈಗೊಳ್ಳತಕ್ಕದ್ದು.
2) ಕ್ಷೇತ್ರ ಶಿಕ್ಷಣಾಧಿಕಾರಿಗಳು ಇಂತಹ ಸಣ್ಣ ಶಾಲೆಗಳನ್ನು ಯಾವ ಸರ್ಕಾರಿ ಶಾಲೆಗಳಿಗೆ ವಿಲೀನಗೊಳಿಸಬೇಕು ಎಂಬುದರ ಯೋಜನೆ ತಯಾರಿಕೆಯಲ್ಲಿ ವಿದ್ಯಾರ್ಥಿಗಳ, ಪೋಷಕರ ಹಾಗೂ ಶಿಕ್ಷಕರ ಸಲಹೆಯನ್ನು ಪಡೆದು, ಆಯಾ ಪ್ರದೇಶದ ಭೌತಿಕ ಲಕ್ಷಣಗಳನ್ನು ಗಮನದಲ್ಲಿಟ್ಟುಕೊಂಡು, ಈ ವಿಲೀನ ಪ್ರಕ್ರಿಯೆ ಹೇಗೆ ಸುಲಲಿತವಾಗಿ ನಡೆಯಬೇಕೆಂದು ಯೋಚಿಸಿ, ಯೋಜನೆಯನ್ನು ತಯಾರು ಮಾಡತಕ್ಕದ್ದು.
3) ಈ ಯೋಜನೆಯನ್ನು ತಾಲ್ಲೂಕು ಮಟ್ಟದ ಪ್ರಾಥಮಿಕ ಶಾಲಾ ವಿಲೀನ ಸಮಿತಿ ಮುಂದೆ ಇಟ್ಟು ಅವರ ಅಭಿಪ್ರಾಯದೊಂದಿಗೆ ಜಿಲ್ಲಾ ಮಟ್ಟದ ಪ್ರಾಥಮಿಕ ಶಾಲಾ ಸಮಿತಿ ಮಂಡಿಸತಕ್ಕದ್ದು. ಜಿಲ್ಲಾ ಸಮಿತಿಯು (ಅನುಬಂಧ – 1) ಇದರ ಮೇಲೆ ಸಮಾಲೋಚನೆ ಮಾಡಿ ಮಕ್ಕಳಿಗೆ ಅನುಕೂಲವಾಗುವಂತೆ ಕ್ರಿಯಾ ಯೋಜನೆಯನ್ನು ಅನುಮೋದಿಸಿ ಅದರಂತೆ ಮುಂದಿನ ಶೈಕ್ಷಣಿಕ ವರ್ಷದಿಂದ ಇಂತಹ ಸಣ್ಣ ಶಾಲೆ ವಿದ್ಯಾರ್ಥಿಗಳನ್ನು ಆಯ್ಕೆಯಾಗಿರುವ ಸಂಪನ್ಮೂಲ ಹೊಂದಿರುವ ಶಾಲೆಗಳಿಗೆ ಮರು ದಾಖಲಿಸಲು ವ್ಯವಸ್ಥೆ ಮಾಡತಕ್ಕದ್ದು.

4) ಈ ಪ್ರಕ್ರಿಯೆಯನ್ನು ನವೆಂಬರ್ ತಿಂಗಳಿನಿಂದ ಪ್ರಾರಂಭ ಮಾಡಿ ಡಿಸೆಂಬರ್ ತಿಂಗಳೊಳಗಾಗಿ ತಾಲ್ಲೂಕು ಮಟ್ಟದಲ್ಲಿ ಮತ್ತು ಜನವರಿ ತಿಂಗಳಿನಲ್ಲಿ ಜಿಲ್ಲಾ ಮಟ್ಟದಲ್ಲಿ ಮುಗಿಸಿ, ಫೆಬ್ರವರಿ 15ರೊಳಗಾಗಿ ಶಾಲೆಗಳಿಗೆ ವಿಲೀನಗೊಳಿಸುವ ಸಂಬಂಧ ವಿವರಗಳನ್ನು ಆಯಾ ಜಿಲ್ಲೆಯಲ್ಲಿ ತಾಲ್ಲೂಕು / ಗ್ರಾಮಗಳಲ್ಲಿ ಪ್ರಕಟಣೆ ಮಾಡತಕ್ಕದ್ದು. ಪ್ರಕಟಣೆಯೊಂದಿಗೆ ಈ ವಿಲೀನ ಪ್ರಕ್ರಿಯೆಯಿಂದ ಹೆಚ್ಚುವರಿಯಾಗುತ್ತಿರುವ ಶಿಕ್ಷಕರ ಪಟ್ಟಿಯನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ತಯಾರು ಮಾಡಿ ಜಿಲ್ಲಾ ಉಪನಿರ್ದೇಶಕರುಗಳಿಗೆ ನೀಡಬೇಕು. ಈ ರೀತಿ ಹೆಚ್ಚುವರಿಯಾದ ಶಿಕ್ಷಕರುಗಳನ್ನು ಕೌನ್ಸಿಲಿಂಗ್ ಮುಖಾಂತರ ಬೇರೆ ಶಾಲೆಗಳಿಗೆ ನೇಮಕ ಮಾಡಲು ಕ್ರಮ ಕೈಗೊಳ್ಳಲಾಗುವುದು. ಜೋಡಿಸಲ್ಪಟ್ಟ ಶಾಲೆಯ ಇಲಾಖಾ ಆಸ್ತಿ, ಸಾರ್ವಜನಿಕ ಕೊಡುಗೆಗಳು, ಇತರೆ ಶಾಲಾ ಆಸ್ತಿ ಮತ್ತು ಸೌಲಭ್ಯಗಳನ್ನು ಸಂರಕ್ಷಿಸಿ, ಸೂಕ್ತವಾಗಿ ಉಪಯೋಗಿಸಲು ಕ್ರಮ ಜರುಗಿಸುವುದು. ಸ್ಥಳೀಯ ಅಂಗನವಾಡಿ ಅಥವಾ ಹತ್ತಿರದ ಇಲಾಖೆಯ ಶಾಲೆಗಳನ್ನು ಈ ಕ್ರಮದಲ್ಲಿ ಗುರುತಿಸಬಹುದು.

ಈ ಮೇಲ್ಕಂಡ ಎಲ್ಲಾ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ವಿಲೀನ ಪ್ರಕ್ರಿಯೆಯನ್ನು ಕಾಲಮಿತಿಯೊಳಗೆ ಸಂಪೂರ್ಣಗೊಳಿಸಲು ಸೂಕ್ತ ಕ್ರಮ ವಹಿಸತಕ್ಕದ್ದು.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ,
ಬೆಂಗಳೂರು.

ಗೆ :

1) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ / ಗುಲ್ಬರ್ಗಾ.
2) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ.
3) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಸಹ ನಿರ್ದೇಶಕರುಗಳಿಗೆ / ಸಿಟಿಇ ಪ್ರಾಂಶುಪಾಲರುಗಳಿಗೆ
4) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ).
5) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಅಭಿವೃದ್ಧಿ).
6) ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಜಿಲ್ಲಾ ಉಪನಿರ್ದೇಶಕರುಗಳ ಮುಖಾಂತರ.

**ಪ್ರತಿಯನ್ನು ಮಾಹಿತಿಗಾಗಿ :**

1) ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇವರಿಗೆ ಸಲ್ಲಿಸಿದೆ.

ದಿನಾಂಕ 22.9.2011ರಂದು ಸನ್ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಸರ್ವ ಶಿಕ್ಷಣ ಅಭಿಯಾನದ ಸಭಾಂಗಣದಲ್ಲಿ 5 ಮತ್ತು 5ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಶಾಲೆಗಳ ಬಗ್ಗೆ ತೆಗೆದುಕೊಂಡ ನಿರ್ಣಯಗಳು.

ಹಾಜರಿದ್ದ ಸದಸ್ಯರು

1) ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು, ಸನ್ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು
2) ಶ್ರೀ ತುಷಾರ್ ಗಿರಿ ನಾಥ್, ಭಾ.ಆ.ಸೇ, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ.
3) ಪ್ರೋ ಸೀತಾರಾಮ್
4) ಶ್ರೀ ಕೆ.ಶ್ರೀಕಂಠೇಶ್ವರ, ಸಮಾಲೋಚಕರು
5) ಶ್ರೀ ರಾಜೇಂದ್ರ, ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ
6) ಶ್ರೀ ಹನುಮಂತರಾಯಪ್ಪ, ನಿರ್ದೇಶಕರು (ಪ್ರೌಢಶಿಕ್ಷಣ)
7) ಶ್ರೀ ಎ.ದೇವಪ್ರಕಾಶ್, ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)
8) ಶ್ರೀ ಎನ್.ಬಿ.ಪಾಟೀಲ್, ಸಹನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ
9) ಶ್ರೀ ಚಾಮರಾಜ್ ಉಪನಿರ್ದೇಶಕರು, ಹಾಸನ
10) ಶ್ರೀಮತಿ ಪ್ರಭಾ ಅಲೆಕ್ಸಾಂಡರ್, ಕಾರ್ಯಕ್ರಮ ಅಧಿಕಾರಿಗಳು, ಎಸ್.ಎಸ್.ಎ
11) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಹಾಸನ.

ಕರ್ನಾಟಕ ರಾಜ್ಯದಲ್ಲಿ 5 ಮತ್ತು 5ಕ್ಕಿಂತ ಕಡಿಮೆ ವಿದ್ಯಾರ್ಥಿಗಳ ದಾಖಲಾತಿಯಾಗಿರುವ ಶಾಲೆಗಳು 590+27 ಇರುತ್ತವೆ ಎಂದು ಡೈಸ್ ಮಾಹಿತಿ 2010-11ರ ಆಧಾರದ ಮೇಲೆ ಸಭೆಯ ಗಮನಕ್ಕೆ ತರಲಾಯಿತು. ಜಿಲ್ಲಾವಾರು ಮಾಹಿತಿಗಳನ್ನು ಮಂಡಿಸಿ ಚರ್ಚಿಸಲಾಯಿತು. ಇಂಥಹ ಶಾಲೆಗಳನ್ನು ನಡೆಸುವುದರಿಂದ ವಿದ್ಯಾರ್ಥಿಗಳಿಗೂ ಉತ್ತಮ ಶಿಕ್ಷಣ ನೀಡಲು ಹಾಗೂ ಕಲಿಕೆಗೆ ಉತ್ತಮ ಪರಿಸರ ಸಿಗುವುದಿಲ್ಲವೆಂತಲೂ, ಇಬ್ಬರು ಶಿಕ್ಷಕರ ಅಪೂರ್ಣ ಬಳಕೆಯಿಂದ ಸರಕಾರಕ್ಕೆ ಆರ್ಥಿಕ ನಷ್ಟ ಉಂಟಾಗುವುದೆಂದು ತಿಳಿಸಿ, ಒಂದು ತರಗತಿಯಲ್ಲಿ ಕನಿಷ್ಟ 20-25 ಮಕ್ಕಳಿದ್ದಾಗ ವಿದ್ಯಾರ್ಥಿಗಳಿಗೆ ಉತ್ತಮ ಕಲಿಕಾ ವಾತಾವರಣ ಉಂಟಾಗುವುದೆಂದು ಸಭೆಯ ಗಮನಕ್ಕೆ ತರಲಾಯಿತು. ಸಭೆಯಲ್ಲಿ ಈ ಬಗ್ಗೆ ಕೂಲಂಕಶವಾಗಿ ಚರ್ಚೆ ನಡೆದು ಎಲ್ಲಾ ಸಾಧಕ ಭಾದಕಗಳ ಬಗ್ಗೆಯೂ ಚರ್ಚಿಸಲಾಯಿತು. ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವ ಹಿನ್ನೆಲೆಯಲ್ಲಿ ಕೆಳಗಿನಂತೆ ನಿರ್ಣಯಗಳನ್ನು ಕೈಗೊಳ್ಳಲಾಯಿತು.

✓ ರಾಜ್ಯಾದ್ಯಂತ ಇರುವ 5 ಮತ್ತು 5ಕ್ಕಿಂತ ಕಡಿಮೆ ವಿದ್ಯಾರ್ಥಿ ದಾಖಲಾತಿ ಹೊಂದಿರುವ ಕಿರಿಯ ಪ್ರಾಥಮಿಕ ಶಾಲೆಗಳನ್ನು ಹತ್ತಿರದ 3 ಕಿಮೀ ಒಳಗೆ ಇರುವ ಕಿರಿಯ ಅಥವಾ ಹಿರಿಯ ಪ್ರಾಥಮಿಕ ಶಾಲೆಗೆ ವಿಲೀನಗೊಳಿಸಬೇಕು. ಶಾಲಾ ಕಟ್ಟಡವನ್ನು ಅದೇ ಊರಿನ ಅಂಗನವಾಡಿಯವರಿಗೆ ತಾತ್ಕಾಲಿಕವಾಗಿ ಉಪಯೋಗಿಸಿಕೊಳ್ಳಲು ಹಾಗೂ ಸುಸ್ಥಿತಿಯಲ್ಲಿ ಇಟ್ಟುಕೊಳ್ಳಲು ತಿಳಿಸುವುದೆಂದು ತೀರ್ಮಾನಿಸಲಾಯಿತು. ಮುಖ್ಯ ಶಿಕ್ಷಕರು, ಶಿಕ್ಷಕರು ಹಾಗೂ ಕ್ಷೇತ್ರಿಯ ಉಸ್ತುವಾರಿ ಅಧಿಕಾರಿಗಳು ಈ ವಿಷಯವನ್ನು ಪೋಷಕರಿಗೆ ಮತ್ತು ಎಸ್.ಡಿ.ಎಂ.ಸಿ ಯವರಿಗೆ ಮನವರಿಕೆ ಮಾಡಬೇಕು. ( ದಿನಾಂಕ 28.10.2011 ಒಳಗೆ)

✓ ವಿಲೀನಗೊಳ್ಳುತ್ತಿರುವ ಕಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕರೆಲ್ಲರೂ ವಿಲೀನಪಡಿಸಿಕೊಳ್ಳುತ್ತಿರುವ ಕಿರಿಯ / ಹಿರಿಯ ಪ್ರಾಥಮಿಕ ಶಾಲೆಯಲ್ಲಿ ತಾತ್ಕಾಲಿಕವಾಗಿ ವಿಲೀನಗೊಂಡು ಕರ್ತವ್ಯ ನಿರ್ವಹಿಸುವುದಕ್ಕೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ವ್ಯವಸ್ಥೆ ಮಾಡಬೇಕು. ವಿಲೀನ ಪಡೆದುಕೊಳ್ಳುತ್ತಿರುವ ಶಾಲೆಯಲ್ಲಿ ಹೆಚ್ಚುವರಿ ಶಿಕ್ಷಕರ ಅಗತ್ಯತೆ ಇಲ್ಲದಿದ್ದಲ್ಲಿ, ಈ ಶಿಕ್ಷಕರನ್ನು ಅದೇ ಕ್ಲಸ್ಟರ್ ವ್ಯಾಪ್ತಿಯಲ್ಲಿ ಅಗತ್ಯತೆ ಇರುವ ಇತರೆ ಶಾಲೆಗೆ ವಿಲೀನಗೊಳಿಸಲು ವ್ಯವಸ್ಥೆ ಮಾಡುವುದು. ಈ ವಿಲೀನ ವ್ಯವಸ್ಥೆ ಈ ವರ್ಷದ ಅಂತ್ಯದವರೆಗೆ ಮುಂದುವರೆಯಬಹುದು. ಇದರಿಂದ ಮಕ್ಕಳಿಗೆ ಹೊಂದಾಣಿಕೆ ಸುಲಭವಾಗುತ್ತದೆ.

✓ 3 ಕಿಮೀ ಒಳಗಡೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, / ಹಿರಿಯ ಪ್ರಾಥಮಿಕ ಶಾಲೆ ಇಲ್ಲದಿದ್ದರೆ ಈ ಶಾಲೆಯನ್ನು ಹಾಗೇ ಮುಂದುವರೆಸಬಹುದು.

✓ ಪೂರ್ವ ಸಿದ್ದತಾ ಕಾರ್ಯಗಳೆಲ್ಲವನ್ನೂ ಅಕ್ಟೋಬರ್ 20ರೊಳಗೆ ಒಳಗೆ ಮುಗಿಸಿಕೊಂಡು ಅಕ್ಟೋಬರ್ 28ರಿಂದ ಈ ವಿಲೀನ / ಶಾಲಾ ಜೋಡಣೆ ಕೆಲಸ ಜಾರಿಗೆ ಬರಬೇಕು. ಮಧ್ಯಾಹ್ನ ಉಪಾಹಾರ ಯೋಜನೆಯ ಕಾರ್ಯಕ್ರಮವು, ವಿಲೀನಗೊಂಡ ಶಾಲೆಯಲ್ಲಿಯೇ ನಡೆಯುತ್ತದೆ. ಅದೇ ರೀತಿ ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಅಡುಗೆಯವರನ್ನು ನೇಮಿಸಿಕೊಳ್ಳಬಹುದು. ಈ ನೇಮಕದಲ್ಲಿ ವಿಲೀನಗೊಳ್ಳುತ್ತಿರುವ ಶಾಲೆಯ ಅಡುಗೆಯವರನ್ನು ನಿಯಮಾನುಸಾರ ತೆಗೆದುಕೊಳ್ಳುವುದು.

✓ ಹಾಗೆಯೇ ಶಾಲೆಯ ಎಲ್ಲಾ ರೆಕಾರ್ಡುಗಳನ್ನು ಮತ್ತು ಶಾಲೆಯಲ್ಲಿನ ಎಲ್ಲ ವಸ್ತುಗಳನ್ನು ವಿಲೀನಗೊಂಡ ಶಾಲೆಯಲ್ಲಿ ಇಟ್ಟು ಸಂರಕ್ಷಿಸುವುದು.

✓ 6 ರಿಂದ 10ರೊಳಗಿನ ಮಕ್ಕಳಿರುವ ಶಾಲೆಗಳನ್ನೂ ಇದೇ ರೀತಿ 3 ಕಿಮೀ ಒಳಗೆ ಇರುವ ಹಿರಿಯ ಪ್ರಾಥಮಿಕ ಶಾಲೆಗಳೊಡನೆ ವಿಲೀನಗೊಳಿಸುವ ಪ್ರಕ್ರಿಯೆಯನ್ನು ನಡೆಸುವ ಸಲುವಾಗಿ ಅಂತಹ ಶಾಲೆಗಳ ಪಟ್ಟಿಯನ್ನು ಫೆಬ್ರುವರಿ 15ರೊಳಗೆ ಪ್ರಕಟಿಸುವುದು. ಈ ಕಾರ್ಯವನ್ನು ಜಿಲ್ಲಾ / ತಾಲ್ಲೂಕು ಪ್ರಾಥಮಿಕ ಶಾಲೆ ವಿಲೀನ ಸಮಿತಿಯು ಮಾಡುವುದು ಹಾಗೂ ಮುಂದಿನ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ವಿಲೀನ ಪ್ರಕ್ರಿಯೆ ಜರುಗಿ ಶೈಕ್ಷಣಿಕ ಕಾರ್ಯಕ್ರಮಗಳು ಸುಗಮವಾಗಿ ನಡೆಯಲು ಅನುವು ಮಾಡಿಕೊಡುವುದು. ಆ ಊರಿನ ಅಂಗನವಾಡಿಯಲ್ಲಿರುವ ಮಕ್ಕಳು, 1ನೇ ತರಗತಿಗೆ ದಾಖಲಾಗಲು ಅರ್ಹತೆ ಇರುವ ಮಕ್ಕಳ ಸಂಖ್ಯೆಯನ್ನಾಧರಿಸಿ ಶಾಲಾ ಸ್ಥಳಾಂತರ ಪ್ರಕ್ರಿಯೆ ಜರುಗಿಸಬೇಕು. 2012ನೇ ಜನವರಿ–ಫೆಬ್ರುವರಿ ಮಾಹೆಯೊಳಗೆ ಉಪನಿರ್ದೇಶಕರು ಇಂಥಹ ಶಾಲೆಗಳ ಪಟ್ಟಿ ಪ್ರಕಟಿಸಬೇಕು. ಪ್ರಕ್ರಿಯೆಯಲ್ಲಿ ಹೆಚ್ಚುವರಿ ಶಿಕ್ಷಕರನ್ನು (ಪಿ.ಟಿ.ಆರ್ ಪ್ರಕಾರ) ಉಪನಿರ್ದೇಶಕರು ಅಗತ್ಯವಿರುವ ಶಾಲೆಗಳಿಗೆ ಮರು ಹಂಚಿಕೆ ಮಾಡು ವುದು. ಈ ಎರಡು ರೀತಿಯ ವಿಲೀನ ಪ್ರಕ್ರಿಯೆಗಳ ಬಗ್ಗೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರು ಪ್ರತ್ಯೇಕ ಆದೇಶ ನೀಡಬೇಕು.

✓ ಈ ಪ್ರಕ್ರಿಯೆಯು ಪ್ರತಿ ವರ್ಷ ನಡೆಯಬೇಕಾಗಿದ್ದು ಪ್ರತಿ ವರ್ಷ ಜೂನ್ ಮಾಹೆಯಲ್ಲಿ ಪ್ರತ್ಯೇಕ ಆದೇಶಕ್ಕೆ ಕಾಯದೇ ಎಲ್ಲಾ ದಾಖಲಾತಿಗಳು ಮುಗಿದ ಕೂಡಲೇ ಕ್ರಮ ತೆಗೆದುಕೊಳ್ಳುವಂತೆ ತೀರ್ಮಾನಿಸಲಾಯಿತು.

ಸಚಿವರು. 24|9|11

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ

(ವಿಶ್ವೇಶ್ವರ ಹೆಗಡೆ, ಕಾಗೇರಿ)

ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಗೆ,

ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ

E:\ADM-2\5 ಕ್ಕಿಂತ ಕಡಿಮೆ ಮಕ್ಕಳು.doc

## ಅನುಬಂಧ – 1

### ಜಿಲ್ಲಾ ಮಟ್ಟದ ಪ್ರಾಥಮಿಕ ಶಾಲಾ ವಿಲೀನ ಸಮಿತಿ

| | | |
|---|---|---|
| ಗೌರವಾಧ್ಯಕ್ಷರು | : | ಅಧ್ಯಕ್ಷರು, ಜಿಲ್ಲಾ ಪಂಚಾಯತ್ |
| ಅಧ್ಯಕ್ಷರು | : | ಅಧ್ಯಕ್ಷರು, ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ |
| ಕಾರ್ಯಾಧ್ಯಕ್ಷರು | : | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು |
| ಸದಸ್ಯ ಕಾರ್ಯದರ್ಶಿ | : | ಉಪ ನಿರ್ದೇಶಕರು (ಆಡಳಿತ),<br>ಸಾರ್ವಜನಿಕ ಶಿಕ್ಷಣ ಇಲಾಖೆ |
| ಸದಸ್ಯರು | : | 1) ಉಪ ನಿರ್ದೇಶಕರು,<br>ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ<br>2) ಸಂಬಂಧಿಸಿದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು<br>3) ಜಿಲ್ಲಾಧ್ಯಕ್ಷರು, ಜಿಲ್ಲಾ ಪ್ರಾಥಮಿಕ ಶಿಕ್ಷಕರ ಸಂಘ |

### ತಾಲ್ಲೂಕು ಮಟ್ಟದ ಪ್ರಾಥಮಿಕ ಶಾಲಾ ವಿಲೀನ ಸಮಿತಿ

| | | |
|---|---|---|
| ಗೌರವಾಧ್ಯಕ್ಷರು | : | ಅಧ್ಯಕ್ಷರು, ತಾಲ್ಲೂಕು ಪಂಚಾಯಿತಿ |
| ಕಾರ್ಯಾಧ್ಯಕ್ಷರು | : | ಕಾರ್ಯನಿರ್ವಾಹಕ ಅಧಿಕಾರಿಯವರು |
| ಸದಸ್ಯ ಕಾರ್ಯದರ್ಶಿ | : | ಕ್ಷೇತ್ರ ಶಿಕ್ಷಣಾಧಿಕಾರಿಯವರು |
| ಸದಸ್ಯರು | : | 1) ಬ್ಲಾಕ್ ಸಂಪನ್ಮೂಲ ಸಂಯೋಜನಾಧಿಕಾರಿಗಳು<br>2)ಮಕ್ಕಳ ಅಭಿವೃದ್ಧಿ ಯೋಜನಾ ಅಧಿಕಾರಿಯವರು(ಸಿಡಿಪಿಓ)<br>3) ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರು |